ಅ) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿನ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರದ ಕಟ್ಟಡದ ನಿರ್ಮಾಣ ಕೆಲಸವನ್ನು ಎಂದು ಪ್ರಾರಂಭಿಸಲಾಯಿತು? ಹಾಗೂ ಇದಕ್ಕಾಗಿ ಇಲ್ಲಿಯವರೆಗೂ ಖರ್ಚಾಗಿರುವ ಹಣ ಎಷ್ಟು?

ಆ) ಕಟ್ಟಡದ ನಿರ್ಮಾಣದ ಕೆಲಸ ಮುಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಕಟ್ಟಡದ ನಿರ್ಮಾಣ ಕೆಲಸವನ್ನು ತ್ವರಿತವಾಗಿ ಮುಕ್ತಾಯಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ) ಕಟ್ಟಡದ ನಿರ್ಮಾಣ ಕೆಲಸವನ್ನು 1986-87ರಲ್ಲಿ ಪ್ರಾರಂಭಿಸಲಾಯಿತು. ಇದುವರೆಗೆ ಖರ್ಚಾಗಿರುವ ಹಣ 12.34 ಲಕ್ಷಗಳು.

ಆ) ಹೌದು.

ಇ) ಕಟ್ಟಡದ ನಿರ್ಮಾಣರು ಅಯವ್ಯಯದ ಕೊರತೆ ಕಾರಣ ಮುಂದಗತಿಯಲ್ಲಿದೆ. ಇದಕ್ಕೆ ಹೆಚ್ಚಿನ ಅಯವ್ಯಯ ವ್ಯವಸ್ಥೆ ಮಾಡಲು ಪ್ರಯತ್ನಿಸಲಾಗುವುದು.

ರಾಜ್ಯದಲ್ಲಿರುವ ಆಶ್ರಮ ಶಾಲೆಗಳ ಸಂಖ್ಯೆ

3699 - ಶ್ರೀ ಎಲ್.ಆರ್. ಶಿವರಾಗಮೇಗೌಡ (ನಾಗಮಂಗಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಸಮಾಜ ಕಲ್ಯಾಣ ಇಲಾಖೆಯು ನಡೆಸುತ್ತಿರುವ ಆಶ್ರಮ ಶಾಲೆಗಳ ಸಂಖ್ಯೆ ಎಷ್ಟು ಇವುಗಳು ಕಾರ್ಯ ನಿರ್ವಹಿಸುತ್ತಿರುವ ಸ್ಥಳ ಹಾಗೂ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಆ) ಮೇಲ್ಕಂಡ ಆಶ್ರಮ ಶಾಲೆಗಳಿಗಾಗಿ ವೆಚ್ಚ ಮಾಡುತ್ತಿರುವ ಹಣದ ಮೊತ್ತವೆಷ್ಟು?

ಇ) ಮೇಲ್ಕಂಡ ಆಶ್ರಮ ಶಾಲೆಗಳಿಗೆ 1-10-90ರಿಂದ ಸಚಿವರು ಒಂದು ಬಾರಿಯಾದರೂ ಬೇಟಿ ನೀಡಿಲ್ಲವೆಂದು ವರದಿಗಳು ನಿಜವೇ?

ಈ) ಭೇಟಿ ನೀಡಿದಲ್ಲಿ ಆಶ್ರಮ ಶಾಲೆಗಳ ಸುಧಾರಣೆಗಾಗಿ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

1) ಪರಿಶಿಷ್ಟ ವರ್ಗದವರ ಆಶ್ರಮ ಶಾಲೆಗಳು 62

2) 62 ಸ್ಥಳಗಳು

3) ಪರಿಶಿಷ್ಟ ವರ್ಗ ವಿದ್ಯಾರ್ಥಿಗಳು - 3900

ಆ) 13.32 ಲಕ್ಷ ರೂ.ಗಳು

ಇ) ಇಲ್ಲ

ಈ) ಬೋಧನಾ ಮಟ್ಟವನ್ನು ಮತ್ತು ಅತ್ಯುತ್ತಮ ಆಹಾರವನ್ನು ಒದಗಿಸುವಂತೆ ನಿರ್ದೇಶ ನೀಡಿರುತ್ತಾರೆ.

ಸಿ.ಎಸ್.ಐ. ಏಜೆಂಟರ ಬಗ್ಗೆ

3702 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮೈಸೂರು ಮಿನರಲ್ಸ್ ಲಿ. ಸಂಸ್ಥೆಯ ಪರವಾಗಿ ನವಮಂಗಳೂರು ಬಂದರಿನಲ್ಲಿ ಕೆಲಸ ಮಾಡುತ್ತಿರುವ ಖಾಸಗಿ ಸಿ.ಎಸ್.ಐ. ವಿಜಂಟರುಗಳು ಯಾರು?

ಆ) ಮೇಲ್ಕಂಡ ಕೆಲಸಗಳನ್ನು ಸಾರ್ವತ್ರಿಕ ಪ್ರಕರಣೆ ನೀಡದೆ ನವೀಕರಿಸಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸದರೀ ವಿಚಾರದ ಬಗ್ಗೆ ವಿಚಾರಣೆ ನಡೆಸಲು ಸರ್ಕಾರ ಸಿದ್ದವಿದೆಯೇ?

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು):

1) ಎಕ್ಸಪೋರ್ಟ್ ಟ್ರೇಡ್ ಲಿಂಕ್ ಎಜೆನ್ಸೀಸ್ ಲಾಲ್‌ಬಾಗ್, ಮಂಗಳೂರು ಅವರು ಗ್ರಾನೈಟ್ ಕಲ್ಲುಗಳ ಬಂದರು ಕಾರ್ಯಕ್ಕಾಗಿ.

2) ಮೆ: ಅಲ್ವಾರೀಸ್ ಅಂಡ್ ಥಾಮಸ್, ಹಂಪನ ಕಟ್ಟೆ, ಮಂಗಳೂರು ಅವರು ಕ್ರೋಮೈಟ್ ಅದುರಿನ ಬಂದರು ಕಾರ್ಯಕ್ಕಾಗಿ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಸರ್ಕಾರಿ ಸ್ವಾಮ್ಯದ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹಂಚಿಕೆ

3703 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರಿ ಸ್ವಾಮ್ಯದ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮವು 1-1-91 ರಿಂದ 15-8-91ರ ವರೆಗೆ ಯಾವ್ಯಾವ ಸಂಸ್ಥೆಗಳ ಮೇಲೆ ಬಂಡವಾಳ ಹೂಡಿದೆ, (ವಿವರಗಳನ್ನೊದಗಿಸುವುದು)

ಆ) ಮೇಲ್ಕಂಡ ಉದ್ಯಮಗಳ ವಿವರಗಳು ಹಾಗೂ ಹೂಡಲಿರುವ ಬಂಡವಾಳದ ಮೊತ್ತದ ವಿವರಗಳನ್ನೊದಗಿಸುವುದು.

ಇ) ಮೇಲ್ಕಂಡ ಉದ್ಯಮಗಳ ಆಯ್ಕೆಗೆ ಸರ್ಕಾರ ಅನುಸರಿಸಿದ ನೀತಿಗಳೇನು?

ಶ್ರೀ ನಜೀರ್ ಅಹಮದ್ (ಸಣ್ಣ ಕೈಗಾರಿಕಾ ರಾಜ್ಯ ಸಚಿವರು):

ಅ) ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮವು ಈ ಕೆಳಕಂಡ ಸಂಸ್ಥೆಗಳಿಗೆ ಬಂಡವಾಳವನ್ನು ಹೂಡಿದೆ :

1) ಕೆ.ಜಿ.ಗ್ಲೂಕೋ ಬಿಯಾಲ್ಸ್ ಲಿ.

2) ಆದಿತ್ಯ ಹಾರ್ಮೋಲಾಜಿಕಲ್ಸ್ ಲಿಮಿಟೆಡ್

3) ಕರ್ನಾಟಕ ಆಂಟಿಬಿಯಾಟಿಕ್ಸ್ ಲಿ.

4) ಕರ್ನಾಟಕ ಬೇಲ್ಡ ಅಟೋ ಲಿ.

5) ವಿಕ್ರಾಂತ್ ಟೈರ್ಸ್ ಲಿ.

6) ಯುಕೇನ್ ಇಂಡಿಯಾ ಲಿ.

7) ಸಹ್ಯಾದ್ರಿ ಇಂಡಸ್ಟ್ರೀಯಲ್ ಗ್ಯಾಸೆಸ್ ಲಿ.

ಆ)

	(ರೂ. ಲಕ್ಷಗಳಲ್ಲಿ)
1) ಕೆ.ಜಿ.ಗ್ಲೂಕೋ ಬಿಯಾಲ್ಸ್ ಲಿ.	64.35
2) ಆದಿತ್ಯಾ ಹಾರ್ಮೋಲಾಜಿಕಲ್ ಲಿ.	3.85